ಹೇಳುತ್ತಾರೆ. ಶಾಸಕರಿಗೆ ಹೆಚ್ಚಿನ ಜನ ಸಂಪರ್ಕ ಇರುತ್ತದೆ ಮತ್ತು ಅವರಿಗೆ ಪುರಸೊತ್ತು ಕೂಡ ಇರುತ್ತದೆ. ಆದುದರಿಂದ, ಜನಗಳ ಹಿತದೃಷ್ಟಿಯಿಂದ ಈ ರೀತಿಯಾದ ಅನುಕೂಲ ಮಾಡಿಕೊಡುವ ಅವಕಾಶ ಇದೆ. ಆಯಾಯಾ ಕ್ಷೇತ್ರದ ಶಾಸಕರೇ ತಾಲ್ಲೂಕು ಸಮಿತಿಗಳ ಚೇರ್‌ಮನ್‌ರಾಗಿರುವುದರಿಂದ, ತಹಶೀಲ್ದಾರರಿಗಿಂತ ಸಮರ್ಪಕವಾಗಿ ಆಹಾರ ವಿತರಣೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಕ್ಕೆ ಅವಕಾಶವಿರುವುದರಿಂದ, ಈ ಜವಾಬ್ದಾರಿಯನ್ನು ಚುನಾಯಿತ ಪ್ರತಿನಿಧಿಗಳಿಗೇ ವಹಿಸಬೇಕೆಂದು ಕೇಳುತ್ತೇನೆ. ಆದುದರಿಂದ, ಈ ವಿಚಾರವನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಎಸ್. ನರಸಿಂಹಮೂರ್ತಿ : ನಮ್ಮ ಶಾಸಕ ಸಹದ್ಯೋಗಿಗಳು ಏನು ಇದ್ದಾರೆ, ಅವರು ಅಭಿವೃದ್ಧಿ ಕಾರ್ಯಗಳ ದೃಷ್ಟಿಯಿಂದ ಅವರು ತಾಲ್ಲೂಕು ಸಮಿತಿಗಳ ಅಧ್ಯಕ್ಷರಾಗಲು ಕಾನೂನಿನಲ್ಲಿ ಅವಕಾಶ ಇದೆ. ಆದರೆ ಆಹಾರ ವಿತರಣೆ ವ್ಯವಸ್ಥೆ ಮತ್ತು ಅದು ಸರಿಯಾಗಿ ನಡೆಯುತ್ತದೆಯೋ ಇಲ್ಲವೋ ಎಂದು ನೋಡಿಕೊಳ್ಳುವುದಕ್ಕೆ ನಾವು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಶಾಸಕರ ಒಂದು ಅಧ್ಯಕ್ಷತೆಯಲ್ಲಿ ಕೆಲವು ಸಮಿತಿಗಳನ್ನು ಮಾಡಬೇಕೆಂಬುದು ಸರ್ಕಾರ ಪರಿಶೀಲನೆಯಲ್ಲಿ ಇದೆ. ಅಂತಿಮವಾಗಿ ಮಾನ್ಯ ಶಾಸಕರ ಸಹಕಾರ ಮತ್ತು ಅವರ ಮೇಲ್ವಿಚಾರಣ ಸೇವೆಯನ್ನು ಸರ್ಕಾರ ಉಪಯೋಗಿಸಿಕೊಳ್ಳುತ್ತದೆ. ಎನ್ನುವ ಒಂದು ಭರವಸೆಯನ್ನು ಅವರಿಗೆ ನಾನು ಕೊಡಬಯಸುತ್ತೇನೆ.

ಅಧ್ಯಕ್ಷರು : ಶ್ರೀ ಶಫಿ ಅಹ್ಮದ್ : ಅವರು ಸಭೆಯಲ್ಲಿ ಹಾಜರಿಲ್ಲ. ಶ್ರೀಮತಿ ಮಲ್ಲಾಜಮ್ಮನವರ ಪ್ರಶ್ನೆ ಲೇಬರ್ ಮಿನಿಸ್ಟರ್‌ಗೆ ಟ್ರಾನ್ಸ್‌ಫರ್ ಆಗಿದೆ. ಈಗ ಶ್ರೀ ವಾಟಾಳ್ ನಾಗರಾಜ್ ಅವರು ತಮ್ಮ ಪ್ರಶ್ನೆಯನ್ನು ಕೇಳಬಹುದು.

ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯ ಬಗ್ಗೆ.

2854 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 20,000 ಪ್ರಾಥಮಿಕ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಸರ್ಕಾರವು ಕ್ರಮಕೈಗೊಂಡಿದೆಯೇ ?

ಆ) ಹಾಗಿದ್ದಲ್ಲಿ, ಅವರನ್ನು ಯಾವಾಗ ನೇಮಕ ಮಾಡಿಕೊಳ್ಳಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಪ್ರಾಥಮಿಕ ಶಾಲಾಶಿಕ್ಷಕರ ವಿಶೇಷ ನೇಮಕಾತಿ ನಿಯಮದಡಿ 5,628 ಮಂದಿ ಅಭ್ಯರ್ಥಿಗಳನ್ನು ಏಪ್ರಿಲ್ 1991ರಲ್ಲಿ ನೇಮಕ ಮಾಡಿಲಾಗಿದೆ. ಪ್ರಸ್ತುತ ಖಾಲಿ ಇರುವ 11,943 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಆದಷ್ಟು ಬೇಗನೆ ನೇಮಕ ಮಾಡಿಕೊಳ್ಳಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ 5628 ಮಂದಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿದ್ದೇವೆ, ಖಾಲಿ ಇರುವ 11943 ಹುದ್ದೆಗಳನ್ನು ಅತಿ ಶೀಘ್ರವಾಗಿ ಭರ್ತಿ ಮಾಡುತ್ತೇವೆಂದು ಹೇಳುತ್ತಾರೆ. ಇದನ್ನು ಯಾವುತ್ತು ಮಾಡುವಿರಿ ಎಂದು ಸ್ಪಷ್ಟವಾಗಿ ಹೇಳಬೇಕೆಂದು ಕೇಳುತ್ತೇನೆ.

ಏಕೆಂದರೆ ಬಹಳ ದಿನಗಳಿಂದ ತಮ್ಮನ್ನು ನೇಮಕ ಮಾಡುತ್ತಾರೆ, ತಮ್ಮನ್ನು ಖಾಯಂ ಮಾಡುತ್ತಾರೆ. ಎಂದು ಕಾದು ಕುಳಿತಿದ್ದಾರೆ. ಈ ಬಗ್ಗೆ ಸರ್ಕಾರದ ಒಂದು ಸ್ಪಷ್ಟವಾದ ನಿರ್ಧಾರವನ್ನು ಹೇಳಿದರೆ ನಮಗೂ ಬಹಳ ಸಂತೋಷವಾಗುತ್ತದೆ. ಇದನ್ನು ದಯಮಾಡಿ ತಿಳಿಸಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಏನು 11943 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ, ಅದು 31-12-90ರವರೆಗೆ ಇರುವಂಥ ಮಂಜೂರಾದ ಹುದ್ದೆಗಳು. ಇದಕ್ಕೆ ಹಣಕಾಸು ಮತ್ತು ಯೋಜನ ಇಲಾಖೆಯಿಂದ ಮಂಜೂರಾತಿಯನ್ನು ದೊರಕಿಸಿಕೊಂಡಿದ್ದೇವೆ. ಇವಕ್ಕೆ ನೇಮಕ ನಿಯಮಗಳನ್ನು ಈಗಾಗಲೇ ನಾವು ಸಿದ್ಧಪಡಿಸಿದ್ದೇವೆ. ಇದು ಕ್ಯಾಬಿನೆಟ್ ಮುಂದಿದೆ. ಇನ್ನು ಮೂರ್ನಾಲ್ಕು ದಿನಗಳಲ್ಲಿ ನಡೆಯುವಂಥ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಇದು ಮಂಜೂರಾಗುತ್ತದೆ. ಅದಾದ ಮೇಲೆ, ಮೀಸಲಾತಿ ನಿಯಮದ ಪ್ರಕಾರ ಮತ್ತು ಹಿಂದಿನ ನಿಯಮದ ಪ್ರಕಾರ, ಯಾವುದೇ ಭ್ರಷ್ಟಾಚಾರಕ್ಕೆ ಅವಕಾಶ ಕೊಡದೇ ನೇಮಕಾತಿಯನ್ನು ಮಾಡಲು ನಾವು ನಿಯಮಗಳನ್ನು ರೂಪಿಸಿದ ನಂತರ ಒಂದು ತಿಂಗಳ ಕಾಲ ನಮಗೆ ಬಂದ ಅರ್ಜಿಗಳನ್ನು ಪರಿಶೀಲಿಸಿ ನಂತರ ಬಹುಶಃ ಎರಡು ತಿಂಗಳೊಳಗಾಗಿ 11,943 ಶಿಕ್ಷಕರ ನೇಮಕಾತಿಗಳನ್ನು ನಾವು ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಪ್ರಾಥಮಿಕ - ಮಾಧ್ಯಮಿಕ ಶಾಲೆಗಳಲ್ಲಿ ಒಂದು ಸ್ಕೂಲು ರೂಮು ಇರುತ್ತದೆ. ಏಳು ತರಗತಿಗಳು ಇರುತ್ತವೆ. ಅದಕ್ಕೆ ಒಬ್ಬ ಉಪಧ್ಯಾಯರು ಇರುತ್ತಾರೆ. ಇಂತಹ ಪರಿಸ್ಥಿತಿಯನ್ನು ತಪ್ಪಿಸುವುದಕ್ಕೆ ಸರ್ಕಾರ ಸರ್ವ ಪ್ರಯತ್ನ ಮಾಡಿ, ಆ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ತಾವೇನಾದರೂ ಭರವಸೆ ಕೊಡುತ್ತೀರಾ?

ಶ್ರೀ ಎಂ. ವೀರಪ್ಪಮೊಯ್ಲಿ : ಸನ್ಮಾನ್ಯ ಅಧ್ಯಕ್ಷರೆ, 11,943 ಹುದ್ದೆಗಳು ಎಂದು ಏನು ಹೇಳಿದ್ದೇವೆ, ಅದರಲ್ಲಿ 50 ಮಕ್ಕಳಿಗೆ ಒಂದು ಅಧ್ಯಾಪಕರ ಅನುಪಾತ ಇಲ್ಲ, ಬದಲಾಗಿ ಹೆಚ್ಚು ನೇಮಕಾತಿ ಮಾಡಬೇಕಾಗಿದೆ. ಅದರ ಬಗ್ಗೆ ಈಗಾಗಲೇ ವರದಿ ತರಿಸುತ್ತಿದ್ದೇವೆ. ನಮ್ಮ ಉದ್ದೇಶವೇನೆಂದರೆ, 50 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರನ್ನು ನೇಮಕ ಮಾಡುವ ಸಲುವಾಗಿ ಪ್ರತ್ಯೇಕವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ವಾಟಾಳ್‌ನಾಗರಾಜ್ : 300 ವಿದ್ಯಾರ್ಥಿಗಳಿದ್ದರೂ ಅನೇಕ ಕಡೆ ಉಪಾಧ್ಯಾಯರುಗಳಿಲ್ಲ, ಅದರ ಬಗ್ಗೆ ಯೋಜನೆಯನ್ನು ತರಿಸಿಕೊಂಡಿದ್ದೀರಾ? ಯಾವ್ಯಾವ ತಾಲ್ಲೂಕುಗಳಲ್ಲಿ ಯಾವ್ಯಾವ ಹಳ್ಳಿಗಳಲ್ಲಿ ಎಷ್ಟೆಷ್ಟು ಶಿಕ್ಷಕರ ಕೊರತೆ ಇದೆ? ಇದನ್ನು ತುಂಬಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆಯೇ ಎಂಬುದನ್ನು ತಾವು ದಯಮಾಡಿ ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ಈಗ 31.12 91 ರೊಳಗೆ ಏನು 11,943 ಹುದ್ದೆಗಳು ಮಂಜೂರಾಗಿವೆ, ಅವನ್ನು ಇನ್ನೆರಡು ತಿಂಗಳೊಳಗೆ ತುಂಬಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಬೇಡಿಕೆಗಳು ಎಷ್ಟು ?

ಶ್ರೀ ಎಂ. ವೀರಪ್ಪ ಮೊಯಿಲಿ : 50 ಮಕ್ಕಳಿಗೆ ಒಬ್ಬರು ಶಿಕ್ಷಕರಂತೆ ತುಂಬಿಸಲು ಪ್ರತ್ಯೇಕವಾಗಿ ಆರ್ಥಿಕ ಶಾಖೆ ಜೊತೆಯಲ್ಲಿ ವ್ಯವಹರಿಸುತ್ತಿದ್ದೇವೆ. ಅವರಿಂದ ಮಂಜೂರಾತಿ ಸಿಕ್ಕಿದ ಕೂಡಲೇ ಈ ಹುದ್ದೆಗಳನ್ನು ತುಂಬುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ನನ್ನನ ಕ್ಷೇತ್ರವಾದ ಚಾಮರಾಜನಗರ ತಾಲ್ಲೂಕ್‌ನಲ್ಲಿ ಮುನ್ನೂರು ಶಿಕ್ಷಕರ ಕೊರತೆ ಇದೆ.

ಶ್ರೀ ಎಂ.ವಿ. ವೆಂಕಟಪ್ಪ : ಈಗ ರಿಟೈರ್ಡ್ ಟೀಚರ್ಸ್ ಏನಿದ್ದಾರೆ. ಅದನ್ನು ಟೆಂಪರರಿ ಆಗಿ ನೇಮಕ ಮಾಡಬೇಕಾಗಿದೆ. ಏಕೆಂದರೆ ಏಳು ಸೆಕ್ಷನ್‌ಗಳಿಗೆ ಒಬ್ಬ ಟೀಚರ್‌ನಂತೆ ಬೇಕಾದಷ್ಟು ಕಡೆ ಇದ್ದಾರೆ. ಅದುದರಿಂದ,ಅಂಥ ಕಡೆ ರಿಟೈರ್ಡ್ ಟೀಚರ್ಸ್ ಅನ್ನು ಪೂರ್ತಿ ಅಪಾಯಿಂಟ್‌ಮೆಂಟ್ ಆಗುವವರೆಗೆ ಅವರನ್ನು ತಾತ್ಕಾಲಿಕವಾಗಿ ನೇಮಕ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಉದ್ದೇಶ ಏನೆಂದರೆ, ಅನೇಕ ವರ್ಷಗಳಿಂದ ಈ ಹುದ್ದೆಗಳನ್ನು ತುಂಬಿಸಲಿಕ್ಕೆ ಬೇರೆಬೇರೆ ಕಾರಣಗಳಿಂದ ಸಾಧ್ಯವಾಗಲಿಲ್ಲ. ಅದು ಪ್ರಾಥಮಿಕ ಮಾಧ್ಯಮಿಕ ಶಾಲೆ ಅಥವಾ ಕಾಲೇಜುಗಳಿರಬಹುದು. ನಮ್ಮ ಉದ್ದೇಶವೆಂದರೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು. ಒಂದು ನಂತರ ಅನುಪಾತದ ಪ್ರಕಾರ ಉಳಿದಂಥ ಹುದ್ದೆಗಳನ್ನು ಭರ್ತಿ ಮಾಡುವುದು ಇನ್ನೊಂದು ಈ ಎರಡನ್ನೂ ಕೂಡಾ ತುಂಬಿಸಲಿಕ್ಕೆ ನಾನೊಂದು ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಎಲ್ಲೆಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಕರ ಹುದ್ದೆಗಳ ಕೊರತೆಯಿದೆ ಎಂದು ಹೇಳಿದರು. ಅದನ್ನೆಲ್ಲಾ ತುಂಬಿಸತಕ್ಕಂಥ ಎರಡು ತಿಂಗಳೊಳಗೆ ತುಂಬಿಸತಕ್ಕಂಥ ಕಾರ್ಯಕ್ರಮ ಹಾಕಿಕೊಂಡದ್ದೇವೆ, ಈ ಬಗ್ಗೆ ಆರ್ಥಿಕ ಶಾಖೆ ಜೊತೆ ವ್ಯವಹರಿಸುತ್ತಿದ್ದೇವೆ. ಬಹುಶಃ ಖಾಲಿ ಬಿದ್ದಂಥ ಎಲ್ಲಾ ಹುದ್ದೆಗಳನ್ನು ಸಂಪೂರ್ಣವಾಗಿ ಐದಾರು ತಿಂಗಳೊಳಗೆ ತುಂಬಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ತಾಲ್ಲೂಕಿನಲ್ಲಿ ಮೊದಲು ತುಂಬಿಸಿ. ಮುನ್ನೂರು ಜನ ಶಿಕ್ಷಕರ ಕೊರತೆ ಇದೆ. ದಯಮಾಡಿ, ಇನ್ನೂರು ಶಿಕ್ಷಕರನ್ನಾದರೂ ಕೊಡಿಸುವ ವ್ಯವಸ್ಥೆ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮ ತಾಲ್ಲೂಕಿನಲ್ಲಿರತಕ್ಕಂಥ ಶಿಕ್ಷಕರ ಖಾಲಿ ಹುದ್ದೆಗಳೀನಿವೆ, ಅವನ್ನೆಲ್ಲಾ ಇನ್ನು ಎರಡು ತಿಂಗಳೊಳಗೆ ತುಂಬಿಸುತ್ತೇವೆ.

ಶ್ರೀ ಎಂ.ಪಿ. ವೆಂಕಟೇಶ್ : ಹೆಗ್ಗಡದೇವನ ಕೋಟೆ ಕ್ಷೇತ್ರದಲ್ಲಿ 150 ಶಿಕ್ಷಕರ ಕೊರತೆ ಇದೆ.

(ಅಧ್ಯಕ್ಷರು : ಆ ಬಗ್ಗೆ ಮಾನ್ಯ ಮಂತ್ರಿಗಳಿಗೆ ತಾವು ಬರೆದು ಕಳುಹಿಸಿ ಕೊಡಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಹುಚ್ಚಮಾಸ್ತಿಗೌಡರು ಕೇಳಿದಂತೆ ಪ್ರಶ್ನೆಯನ್ನು ನಾನು ಕಳೆದ ಅಧಿವೇಶನದಲ್ಲಿ ಕೇಳಿದ್ದೆ. ಕಳೆದ ಅಧಿವೇಶನದಲ್ಲಿ ಅಕಾಡೆಮಿಕ್ ಇಯರ್ ಪ್ರಾರಂಭವಾಗುವುದರೊಳಗೆ ಶಿಕ್ಷಣ ಮಂತ್ರಿಗಳು ಒಂದು ಆಶ್ವಾಸನೆ ಕೊಟ್ಟಿದ್ದರು. ಈ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದಕ್ಕೆ ಮುಂಚೆ ತಾವು ಪ್ರತಿಯೊಂದು ವರ್ಗಕ್ಕೆ ಒಬ್ಬ ಶಿಕ್ಷಕರನ್ನು ನೇಮಕ ಮಾಡುವಂತಹ ಭರವಸೆ ಕೊಟ್ಟಿದ್ದೀರಿ. ಈಗ ಹೇಳುತ್ತಿದ್ದೀರಿ, ಈಗ ಏನು ಭರ್ತಿಮಾಡುತ್ತೇವೆ. ಅದೂ ಸಾಲುವುದಿಲ್ಲ. ಏಳು ತರಗತಿಗಳಿಗೆ ನಾಲ್ಕು ಜನ ಶಿಕ್ಷಕರು ಇರುತ್ತಾರೆ. ಅಂಥ ಪರಿಸ್ಥಿತಿ ಮುಂದುವರಿಯುತ್ತದೆಂದು ಹೇಳುತ್ತಿದ್ದಾರೆ. ಆದುದರಿಂದ, ನನಗೆ ಗೊತ್ತಿರುವ ಪ್ರಕಾರ, ನಮ್ಮ ರಾಜ್ಯದಲ್ಲಿ ಎಷ್ಟು ಅವಶ್ಯಕತೆ ಇದೆ? ನಮ್ಮ ಎಲ್ಲಾ ಶಾಲೆಗಳಿಗೆ ಪ್ರತಿಯೊಂದು ಸ್ಟ್ಯಾಂಡರ್ಡ್‌ಗೆ ಒಬ್ಬ ಶಿಕ್ಷಕನನ್ನು

ನೇಮಕ ಮಾಡುವುದಕ್ಕೆ ನಿಮ್ಮ ಹತ್ತಿರ ಹಣವಿಲ್ಲ. ಹಣವಿಲ್ಲ ಎನ್ನುವುದಕ್ಕೆ ಕಾರಣ, ನಿಮ್ಮ ಪೇ ಸ್ಕೇಲ್ಸ್. ಈಗಿರುವಂಥ ಪೇ ಸ್ಕೇಲ್ಸ್ ಇಟ್ಟುಕೊಂಡು ನೀವು ನಮ್ಮ ಹಳ್ಳಿಗಳಲ್ಲಿರುವ ಮಕ್ಕಳಿಗೆ ಪೂರ್ತಿ ಅಕ್ಷರ ಕಲಿಸುತ್ತೇವೆಂದು ಹೇಳುವುದು ಶುದ್ಧ ಸುಳ್ಳು, ಅದು ಸಾಧ್ಯವಾಗುವುದಿಲ್ಲ.

ನಿಮ್ಮಿಂದ ಪೂರ್ಣ ಶಿಕ್ಷಣ ಸಾಧನೆ ಮಾಡಲು ಆಗುವುದಿಲ್ಲ. ಆದುದರಿಂದ ನಾನು ಸಲಹೆ ಮಾಡುತ್ತೇನೆ. ಪ್ರಾರ್ಥಮಿಕ ಶಿಕ್ಷಕರ ಒಂದು ಪೇ ಸ್ಕೇಲ್‌ನ್ನು ಬದಲಾವಣೆ ಮಾಡಿ, ಅಂದರೆ ಕೆಳಗೆ ಇಳಿಸಿ, ನಾವು ನಿಮಗೆ ಶಿಕ್ಷಕರನ್ನು ಒದಗಿಸಿ ಕೊಡುತ್ತೇವೆ. ಕಡಿಮೆ ಸ್ಕೇಲ್‌ನಲ್ಲಿ ಎಷ್ಟು ಶಿಕ್ಷಕರು ಬೇಕೋ ಅಷ್ಟು ಶಿಕ್ಷಕರನ್ನು ನಾವು ನೇಮಕ ಮಾಡಿಕೊಳ್ಳಬಹುದು. ಸುಮ್ಮನೆ ಸಾಕ್ಷರತಾ ಅಂಧೋಳನವೆಂದು ಮಾಡಿ ನಾವು ಎಲ್ಲ ಹಣವನ್ನು ಹಾಳು ಮಾಡುತ್ತಿದ್ದೇವೆ. ಆದರಿಂದ ಮೂರು ಕಾಸಿನ ಕೆಲಸವಾಗುತ್ತಿಲ್ಲ. ಹಣವೆಲ್ಲವನ್ನು ಜಿಲ್ಲೆಗಳಲ್ಲಿ ತಿಂದುಹಾಕುತ್ತಿವ್ವಾರೆ. ಈ ಹಣದಲ್ಲೇ ಪ್ರಾಥಮಿಕ ಶಿಕ್ಷಣದ ಪೂರ್ಣ ಸಾಧನೆ ಮಾಡಬೇಕು. ಕಡಿಮೆ ಸ್ಕೇಲ್‌ನಲ್ಲಿ ಪ್ರಾಥಮಿಕ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ತೀರ್ಮಾನಕ್ಕೆ ಸರ್ಕಾರದವರು ಬಂದರೆ ಈ ಕೆಲಸ ಆಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅಧ್ಯಕ್ಷರೆ, ತಾವು ಅನುಮತಿಯನ್ನು ಕೊಟ್ಟರೆ ಇದಕ್ಕೆ ಉತ್ತರವನ್ನು ಕೊಡುತ್ತೇನೆ. ಏಕೆಂದರೆ ವಿವರಣೆ ಬಹಳವಿದೆ. ಮೊದಲು ಒಂದು ಪ್ರಶ್ನೆ ಬಂದಿತ್ತು. ಆಗ ಶಫೀಅಹಮ್ಮದ್ ಇರಲಿಲ್ಲ. ಆದರಲ್ಲಿ ಸ್ವಲ್ಪ ಉತ್ತರವಿದೆ. ಪ್ರಾಥಮಿಕ ಹಂತದಿಂದ ಕಾಲೇಜುಮಟ್ಟದವರೆಗೆ ಈ ಸಭೆಯ ವಿಶ್ವಾಸವನ್ನು ತೆಗೆದುಕೊಂಡು ಯಾವರೀತಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಹುದ್ದೆಗಳನ್ನು ತುಂಬಲು ಎಂಬ ಬಗ್ಗೆ ಮಾತನಾಡಲು ತಾವು ಅನುಮತಿಯನ್ನು ಕೊಟ್ಟರೆ ಹೇಳುತ್ತೇನೆ. ಈಗಾಗಲೆ ನಾನು ಹೇಳಿದ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಮತ್ತು ಆರ್ಥಿಕ ಶಾಖೆಯವರು ಶಿಕ್ಷಕರ ಹುದ್ದೆಗಳನ್ನು ತುಂಬುವುದಕ್ಕೆ ಬಹಳ ಉದಾತ್ತಮನೋಭಾವದಿಂದ ಒಪ್ಪಿಗೆ ಕೊಟ್ಟಿದ್ದಾರೆ. ಅದನ್ನು ಇಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ ಕಳೆದ 10 ವರ್ಷಗಳಿಂದಲೂ ಅದು ಸಾಧ್ಯವಾಗಿರಲಿಲ್ಲ. ಈಗ ಇದು ಮೂಲ ಭೂತ ಅವಶ್ಯಕತೆಯಾಗಿದೆ. ನಾವು ಶಿಕ್ಷಕರು ಇಲ್ಲದೆ ಸಂಸ್ಥೆಗಳನ್ನು ನಡೆಸಲು ಆಗುವುದಿಲ್ಲ ಎನ್ನುವ ಉದ್ದೇಶದಿಂದ ಈಗ ಹುದ್ದೆಗಳನ್ನು, ಪ್ರಮುಖವಾಗಿ ನಮ್ಮ ಕಾಲೇಜುಗಳಲ್ಲಿ ಅಂದರೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಖಾಲಿಯಿರುವ ಸುಮಾರು 279ಹುದ್ದೆಗಳನ್ನು ತುಂಬಿಸಿಕೊಳ್ಳಲು ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬರೆದಿದ್ದೇವೆ. ಅವರು ಪ್ರಕಟಣೆ ಮಾಡಿದ್ದಾರೆ. ಈಗ ಸಧ್ಯದಲ್ಲಿ ಅವರು ನೇಮಕಾತಿಗಾಗಿ ಮೌಖಿಕ ಸಂದರ್ಶನಕ್ಕೆ ಕರೆಯುತ್ತಾರೆ. ಅದಲ್ಲದೆ ಸುಮಾರು 626 ಹುದ್ದೆಗಳು ಪ್ರಥಮದರ್ಜೆ ಕಾಲೇಜುಗಳಲ್ಲಿ ಏನು ಬಾಕಿ ಇತ್ತು.

(Some hon. members were seen talking to the hon. Chief Minister)

MR. SPEAKER : At least during the question hour, I do not want the Treasury Benches to be disturbed.

ಶ್ರೀ ಎಂ. ವೀರಪ್ಪ ಮೊಯಿಲಿ : 271 ಹುದ್ದೆಗಳ ಬಗ್ಗೆ ಈಗಾಗಲೇ ಸಂದರ್ಶನಕ್ಕೆ ಕರೆ ಬರುತ್ತದೆ. ಮೌಖಿಕವಾಗಿ ಸಂದರ್ಶನವಾಗುತ್ತದೆ. ಬಹುಶಃ ಒಂದು ತಿಂಗಳೊಳಗೆ ಪ್ರಥಮ ದರ್ಜೆಯ ಕಾಲೇಜುಗಳಲ್ಲಿ ಇರತಕ್ಕ ಉಪನ್ಯಾಸಕರ ಹುದ್ದೆಗಳನ್ನು ತುಂಬಲಾಗುತ್ತದೆ. ಇನ್ನು ಉಳಿದ [illegible] ಹುದ್ದೆಗಳನ್ನು ಕೂಡ ನಾವು

ಮಂಜೂರಾತಿ ಮಾಡಲು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಈ 626 ಹುದ್ದೆಗಳನ್ನು ತುಂಬಬೇಕೆಂದು ನಾವು ಈವತ್ತೋ ನಾಳೆಯೋ ಲೋಕಸೇವಾ ಆಯೋಗಕ್ಕೆ ಬರೆಯುತ್ತಿದ್ದೇವೆ. ಅವರು ಬಹುಶಃ ಒಂದು ತಿಂಗಳೊಳಗೆ ಇದನ್ನು ಪ್ರಕಟಣೆ ಮಾಡಿಕೊಂಡು ಬಹುಶಃ ಎರಡು ಮೂರು ತಿಂಗಳೊಳಗೆ 626 ಮತ್ತು 271 ಈ ಉಪನ್ಯಾಸಕರ ಹುದ್ದೆಗಳನ್ನು ಪ್ರಾಥಮ ದರ್ಜೆಯ ಕಾಲೇಜುಗಳಲ್ಲಿ ತುಂಬುವುದರಿಂದ ಸಾಧಾರಣವಾಗಿ ನೆಮ್ಮದಿ ಬರತಕ್ಕ ವ್ಯವಸ್ಥೆ ಪ್ರಥಮ ದರ್ಜೆಯ ಕಾಲೇಜುಗಳಲ್ಲಿ ಆಗುತ್ತದೆ.ಇನ್ನು ಎರಡನೆಯದಾಗಿ ಪದವಿಪೂರ್ವ ಕಾಲೇಜುಗಳಲ್ಲಿ ಕೂಡ ಸುಮಾರು 332 ಹುದ್ದೆಗಳನ್ನು ನಾವು ಈಗಾಗಲೇ ರಾಜ್ಯ ಮಟ್ಟದ ನೇಮಕಾತಿ ಸಮಿತಿಗಳನ್ನು ಮಾಡಿ ಅದರ ಮೂಲಕ ಕೆಲವು ಹುದ್ದೆಗಳನ್ನು ತುಂಬಿದ್ದೇವೆ. ಇನ್ನು 352 ಹುದ್ದೆಗಳಿವೆ. ಅಂದರೆ ಒಟ್ಟು 434 ಹುದ್ದೆಗಳು, ಇನ್ನು ಹೊಸದಾಗಿ ಕಾಲೇಜುಗಳನ್ನು ಮಾಡಿದರೆ ಸುಮಾರು 228 ಹುದ್ದೆಗಳು ಅಂದರೆ ಸುಮಾರು 800 ಹುದ್ದೆಗಳು ಪದವಿ ಪೂರ್ವಕಾಲೇಜುಗಳಲ್ಲಿ ಬಾಕಿ ಇದೆ, ಅವುಗಳನ್ನು ಕೂಡ ತುಂಬಲು ಈಗಾಗಲೆ ನೇಮಕ ಸಮಿತಿಗಳನ್ನು ಮಾಡಿ ಅದಕ್ಕೆ ಒಂದು ಸಂಪೂರ್ಣವಾದ ಸ್ವರೂಪವನ್ನು ಕೊಡುತ್ತಿದ್ದೇವೆ.ಈ 800 ಹುದ್ದೆಗಳನ್ನು ಪದವಿಪೂರ್ವ ಕಾಲೇಜುನಲ್ಲಿ ತುಂಬಲು ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಬಹುಶಃ ಎರಡು ಮೂರು ತಿಂಗಳೊಳಗೆ ಪದವಿಪೂರ್ಣ ಕಾಲೇಜುಗಳಲ್ಲಿರುವ ಹುದ್ದೆಗಳನ್ನು ತುಂಬಲು ಎಲ್ಲಾ ರೀತಿಯ ಸಕ್ರಿಯಾವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇದು ಕೇವಲ ಆಶ್ವಾಸನೆಯಲ್ಲ.

ಇನ್ನು ಹೈಸ್ಕೂಲ್‌ಗಳಲ್ಲಿ ಕೂಡ ಸುಮಾರು 1685 ಹುದ್ದೆಗಳನ್ನು ಭರ್ತಿಮಾಡಲು ಮಂಜೂರಾತಿಯನ್ನು ಅರ್ಥಶಾಖೆಯಿಂದ ತೆಗೆದುಕೊಂಡು ಅವುಗಳನ್ನು ತುಂಬಲು ವಿಭಾಗಮಟ್ಟದಲ್ಲಿ ನೇಮಕಾ ಸಮಿತಿಗಳನ್ನು ಮಾಡಬೇಕು. ಏಕೆಂದರೆ ನಾವು ರಾಜ್ಯ ಮಟ್ಟದಲ್ಲಿ ಪಿಯುಸಿ ಅಥವಾ ಪದವಿಪೂರ್ವ ಕಾಲೇಜು ಮತ್ತು ಮಾಧ್ಯಮಿಕ ಶಾಲೆಗಳಿಗೆ ನೇಮಕಾತಿಯನ್ನು ಮಾಡಿದರೆ ಕೆಲವೇ ಜಿಲ್ಲೆಗಳಿಗೆ ಹೆಚ್ಚು ನೇಮಕಾತಿಯಾಗುತ್ತದೆ, ವಿಭಾಗಿಯವಾಗಿ ಸರಿಸಮಾನವಾಗಿ ಇದರಿಂದ ಹುದ್ದೆಗಳು ಹಂಚಿಕೆಯಾಗುವುದಿಲ್ಲವೆಂದು ಹೇಳಿ ಅಯ್ಯಾಯ ವಿಭಾಗದಲ್ಲಿರತಕ್ಕ ಉದ್ಯೋಗವಿನಿಯಮ ಕೇಂದ್ರಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟು ಅಲ್ಲಿಂದ ನಾವು ಇದನ್ನು ತಂದು ಅದೇ ಮಿಸಲಾತಿ ಮತ್ತು ಕಂಪ್ಯೂಟರ್‌ನಲ್ಲಿ ಹಾಕಿ, ಅದನ್ನು ನೇಮಕಾತಿ ಮಾಡಿಕೊಳ್ಳುತ್ತೇವೆ.

ಈಗ ನಾವು ಎಲ್ಲರನ್ನೂ ಇಂಟರ್‌ವ್ಯೂ ಕರೆದರೆ ಸುಮಾರು 6-7 ತಿಂಗಳು ಬರೀ ಇಂಟರ್‌ವ್ಯೂನಲ್ಲೇ ಕಳೆದು ಹೋಗುತ್ತದೆ. ನಂತರ ಒಂದೂವರೆ ವರ್ಷದವರೆಗೆ ಯಾವುದೇ ನೇಮಕಾತಿಯಾಗುವುದಿಲ್ಲ. ನಮಗೆ ನಿಜವಾಗಿ ನೇಮಕಾತಿಯಾಗಬೇಕಾದರೆ ನಾವು ಪ್ರಾಥಮಿಕ ಶಾಲೆಗಳಿಗೆ ಯಾವ ರೀತಿ ನೇಮಕಾತಿ ಮಾಡುತ್ತೇವೆಯೋ ಅದೇ ಮಾದರಿಯಲ್ಲಿ ಇಲ್ಲಿ ಪದವಿಪೂರ್ವ ಕಾಲೇಜಿನಿಂದ ಪ್ರಾಥಮಿಕ ಹಂತದವರೆಗೆ ನೇಮಕಾತಿ ಮಾಡಬೇಕೆನ್ನುವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಈ ಕ್ರಮದಲ್ಲಿಯೇ ನಾವು ಹೋಬಳಿ ಇನ್ನು 2-3 ತಿಂಗಳಲ್ಲಿ ಮಾಧ್ಯಮಿಕ ಶಾಲೆಗಳ ಎಲ್ಲಾ ಹುದ್ದೆಗಳನ್ನು ಅಂದರೆ 1685 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಸನ್ಮಾನ್ಯ ಪ್ರಾಚಾರ್ಯರಾದಂತಹ ನಂಜುಂಡಸ್ವಾಮಿಯವರು ಈ ಸಾಕ್ಷರತಾ ಆಂಧೋಲನಾ ಮತ್ತು ಇದಕ್ಕೆ ಏನು ಕೆಲಸ ಎಂದು ಕೇಳಿದರು. ಸಾಕ್ಷರತಾ ಆಂಧೋಲನವೇ ಬೇರೆ, ಇದೇ ಬೇರೆ,

ತಮಗೂ ಗೊತ್ತಿದೆ. ಒಂದು ವಿಷಯ ಹೇಳುವುದಾದರೆ ಒಂದು ಪರ್ಸೆಂಟ್ ಲಿಟರಸಿ ಜಾಸ್ತಿಯಾಯಿತೆಂದರೆ ರಾಷ್ಟ್ರೀಯ ವರಮಾನದಲ್ಲಿ ಆದರಿಂದ ಮೂರು ಪಾಲು ಜಿ.ಎನ್. ಪಿ. ಜಾಸ್ತಿಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಆಂಧೋಲನಕ್ಕಿಂತ ಪೆಚ್ಚಾಗಿ ಪ್ರಚಾರವೆ ಜಾಸ್ತಿಯಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಮಗೆ ಗೊತ್ತಿದೆ. ತಮ್ಮ ತಮ್ಮ ವಿಭಾಗದಲ್ಲಿ ಡಿಸೆಂಬರ್ 1993ರ ಒಳಗಡೆ ನಮ್ಮ ರಾಜ್ಯವನ್ನು ಸಾಕ್ಷರತೆಯ ಒಂದು ರಾಜ್ಯವನ್ನಾಗಿ ಮಾಡುವವರಿದ್ದೇವೆ. ಕೇರಳಾ ಬಿಟ್ಟರೆ ನಾವು ಇದ್ದೇವೆ. ಸುಮಾರು 10 ಜಿಲ್ಲೆಗಳನ್ನು ಸಾಕ್ಷರತಾ ಆಂಧೋಲನದಲ್ಲಿ ನಾವು ಜನವರಿಯಿಂದ ತೆಗೆದುಕೊಳ್ಳುತ್ತೇವೆ. ಏಕೆಂದರೆ ತಮ್ಮ ಅಭಿಪ್ರಾಯದಂತೆ ನನ್ನ ಅಭಿಪ್ರಾಯವೂ ಕೂಡ ಇತ್ತು. ಅನೇಕ ಕಲಿಕೆ ಕೇಂದ್ರಗಳಿಗೆ ನಾನು ಭೇಟಿ ನೀಡಿದಾಗ ನಾವು ಸಹ ಪರಿವರ್ತನೆಯಾಗಿದ್ದೇನೆ. ಒಂದು ತರಹ ಯುಗಧರ್ಮ ಪರಿವರ್ತನೆಯಾದ ಹಾಗೆ ನನಗನ್ನಿಸುತ್ತದೆ. ಇಂತಹ ಕಲಿಕೆ ಕೇಂದ್ರಗಳು ಪ್ರಚಾರದಲ್ಲಿ ಬರಬೇಕಾದರೆ ಅಯಾ ಪ್ರದೇಶಗಳಿಗೆ ನಾನು ತಮ್ಮನ್ನು ಕೂಡ ಕರೆದುಕೊಂಡು ಹೋಗುವುದಕ್ಕೆ ಇಚ್ಛಿಪಡುತ್ತೇನೆ. ಬಹುಶಃ ತಾವು ಅಲ್ಲಿಗೆ ಹೋದಮೇಲೆ ಸಮಾಜದಲ್ಲಿ ಆಗತಕ್ಕಂತಹ ಸಮುದಾಯದ ಪರಿವರ್ತನೆ ನೋಡಿದರೆ ಖಂಡಿತವಾಗಿ ಮತ್ತು ಪ್ರಾಮಾಣಿಕವಾಗಿ ಹೇಳುತ್ತೇನೆ ನಾನೇ ಬದಲಾವಣೆಯಾಗಿದ್ದೇನೆ ಅಂಥ ನಮಗೆ ಭಾವನೆಯಾಗುತ್ತಾ ಇದೆ. ದಯವಿಟ್ಟು ಕಲಿಕೆ ಕೇಂದ್ರಗಳಿಗೆ ಬನ್ನಿ. ಇಂದಿನ ವಯಸ್ಕರ ಶಿಕ್ಷಣ ವಿಷಯವನ್ನು ನಾನು ಹೇಳುವುದು ಇದ್ದರೆ ಅದೊಂದು ಅಕಾಡ ಭೂತಿತನ ಆದರೆ ಸಾಕ್ಷರತಾ ಆಂದೋಲನ ನಿಜವಾಗಿ ಸಮುದಾಯ ಬದಲಾವಣೆ ಮಾಡುವಂತಹ ಒಂದು ದೊಡ್ಡ ಪರಿವರ್ತನೆಯಾಗುತ್ತಿದೆ.ಅದನ್ನು ಚರ್ಚೆ ಮಾಡಿ ತಮ್ಮನ್ನು ನಂಬಿಸಿ ತಮ್ಮನ್ನು ಒಲಿಸುವುದಕ್ಕಿಂತಲೂ ಬಹುಶಃ ಸ್ವತಃ ಆ ಜಾಗಗಳಿಗೆ ಹೋಗಿ, ಪರಿಸರಕ್ಕೆ ಹೋಗಿ ಅನುಭವ ಮಾಡಿ ಅದನ್ನು ನೋಡುವುದಿದ್ದರೆ ಅದು ನಿಜವಾಗಿ ಸಂಪೂರ್ಣವಾದ ರೋಮಾಂಚಕವಾದಂತಹ ಒಂದು ಪರಿಸ್ಥಿತಿ ಅಲ್ಲಿ ಉದ್ಭವವಾಗುತ್ತದೆ. ಚರ್ಚೆಯಲ್ಲಿ ನಾವು ವ್ಯತ್ಯಾಸವಾಗಬಹುದು. ಅನುಭವವೇ ಬೇರೆ ನಾವು ಮಾಡುವಂತಹ ಚರ್ಚೆಯೇ ಬೇರೆ. ಆದುದರಿಂದ ಸಾಕ್ಷರತಾ ಆಂದೋಲನಕ್ಕೂ ಈ ರೀತಿಯ ಒಂದು ವ್ಯವಸ್ಥೆ ಇದೆ. That is not in stiutionalised education ಸಾಂಸ್ಥಿತವಾದಂತಹದ್ದಲ್ಲ. ಸಾಕ್ಷರಕ ಆಂದೋಲನ ಎಂಬುದು ಸಂಸ್ಥೆಗಳಿಗೆ ಹೊರತಾಗಿರುವಂತಹದು. ತಮಗೆ ಗೊತ್ತಿರುವ ಹಾಗೆ Mao-Tse-Tung ನವರು 1960 ರಂದು ಒಂದು ಘೋಷಣೆ ಹೊರಡಿಸಿದರು. ಎಲ್ಲಾ ವಿಶ್ವವಿದ್ಯಾನಿಲಯಗಳನ್ನು ನಿಲ್ಲಿಸಿ ಈ ಸಾಕ್ಷರತೆಯ ಕೆಲಸ ಮಾಡೋಣವೆಂದು ಹೇಳಿದರು. ಆದ್ದರಿಂದ ಇವೆರಡು ಬೇರೆ ಬೇರೆ. ಆದುದರಿಂದ ಹುದ್ದೆಗಳನ್ನು ತುಂಬಿಸಲಿಕ್ಕೆ ನಮ್ಮ ಸರ್ಕಾರ ಪ್ರಥಮವಾಗಿ ಬಹಳ ಕ್ರಾಂತಿಕಾರಿ ಹೆಜ್ಜೆಯನ್ನು ಇಟ್ಟಿದೆ. ಮಾನ್ಯ ಮುಖ್ಯಮಂತ್ರಿಗಳವರು ಅರ್ಥ ಶಾಖೆ ಮತ್ತು ಯೋಜನಾ ಇಲಾಖೆಗೆ ಕೊಟ್ಟಿದ್ದರಿಂದ ಆ ಹುದ್ದೆಗಳನ್ನು ಭರ್ತಿಮಾಡುವುದಕ್ಕೆ ಸಕ್ರಿಯವಾದಂತಹ ಕಾರ್ಯಕ್ರಮ ನಡೆಯುತ್ತಿದೆ.

MR : SPEAKER : Downward revision of pay scales ಬಗ್ಗೆ ಅವರು ಕೇಳಿದ್ದರು. ಆ ಬಗ್ಗೆ ಹೇಳಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಸಾಕ್ಷರತಾ ಆಂದೋಲನದ ಬಗ್ಗೆ ಮಾನ್ಯ ಮಂತ್ರಿಗಳು ಬಹಳ ಮಾತನಾಡುತ್ತಿದ್ದರು. ತಮ್ಮ

ಜಿಲ್ಲೆಯ ಜಿಲ್ಲಾಪರಿಷತ್ತಿನವರು ಸಾಕ್ಷರತಾ ಆಂದೋಲನದ ಅಂಗವಾಗಿ ಪೆನ್ಸಿಲ್ ತರುವುದಕೋಸ್ಕರ ಮೊನ್ನೆ ಬೊಂಬಾಯಿಗೆ ಹೋದರು.

ಅಧ್ಯಕ್ಷರು : ನಮ್ಮ ಮದ್ದೂರಿನಲ್ಲೇ ಪೆನ್ಸಿಲ್ ಸಿಗುತ್ತಿತ್ತು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಅವರು ನನ್ನ ಪ್ರಶ್ನೆಗೆ ಉತ್ತರ ಹೇಳಲಿಲ್ಲ.

ಅಧ್ಯಕ್ಷರು : ಅದನ್ನೇ ನಾನು ಕೇಳಿದೆ.

ಪ್ರೊ. ಎಂ.ಡಿ. ನಂಜುಂಡುಸ್ವಾಮಿ ; ಪೇಸ್ಕೇಲ್ ಏನು ಮಾಡುತ್ತಾರೆ? ಅದನ್ನು ಹಾಗೆ ಇಟ್ಟುಕೊಂಡು ಮಾಡುವುದಾದರೆ ಯಾವಾಗ ನಮ್ಮ ಮಕ್ಕಳಿಗೆ ಒಂದು ಸ್ಟ್ಯಾಂಡರ್ಡ್‌ಗೆ ಒಬ್ಬ ಶಿಕ್ಷಕರನ್ನು ಯಾವ ವರ್ಷದೊಳಗೆ ಕೊಡುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮದ್ದೂರಿನಲ್ಲಿ ನಮ್ಮ ಪೆನ್ಸಿಲ್ ಕಡಿಮೆ ಬೆಲೆಗೆ ಸಿಗುತ್ತದೆ. ಅದೇ ಪೆನ್ಸಿಲ್ ಬೊಂಬಾಯಿನಲ್ಲಿ ಜಾಸ್ತಿ ಬೆಲೆಗೆ ಸಿಗುತ್ತದೆ. ಅದಕ್ಕೇ ಹೋಗಿದ್ದಾರೆ.

ಶ್ರೀ ವಾಟಾಳ ನಾಗರಾಜ್ : ಪೆನ್ಸಿಲ್ ತರುವುದಕ್ಕೆ ಬೊಂಬಾಯಿಗೆ ಹೋದರೆ, ಕಪ್ಪು ಹಲಗೆ ತರುವುದಕ್ಕೆ ಡೆಲ್ಲಿಗೆ ಹೋಗಬೇಕಾಗುತ್ತದೆ, ಈ ತರಹ ಸಾಕ್ಷರತಾ ಆಂದೋಲನ ನಡೆಯುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ : ಆ ತರಹ ನಡೆದರೆ ಅದನ್ನು ನಿಲ್ಲಿಸೋಣ. ಪೆನ್ಸಿಲ್. ಕಪ್ಪುಹಲಗೆ ಎಲ್ಲಾ ಇಲ್ಲೇ ಸಿಗುತ್ತದೆ. ಅಲ್ಲಿಗೆ ಏತಕ್ಕೆ ಹೋದರು ಎಂಬುದನ್ನು ವಿಚಾರ ಮಾಡೋಣ.

ಅಧ್ಯಕ್ಷರು : ಈಗ ಸಚಿವರಾದ ನರಸಿಂಹಮೂರ್ತಿಯವರು ಮೇಲ್ಮನೆಗೆ ಹೋಗಬೇಕಾಗಿದೆ. ಆದ್ದರಿಂದ ಅವರ ಪ್ರಶ್ನೆಗಳನ್ನು ಮೊದಲು ತೆಗೆದುಕೊಳ್ಳೋಣ.

ನ್ಯಾಯ ಬೆಲೆ ಅಂಗಡಿಗಳಲ್ಲಿ ವಿತರಣೆ ಆಗುತ್ತಿರುವ ಪದಾರ್ಥಗಳ ಹಂಚಿಕೆ ಬಗ್ಗೆ.

2871 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ರಾಜ್ಯದ ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಣೆಯಾಗುತ್ತಿರುವ ಪದಾರ್ಥಗಳು ಯಾವುವು?*

2) *ಇವುಗಳ ಕೊರತೆ ಇರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೆ?*

3) *ರಾಜ್ಯದಲ್ಲಿ ಕಳೆದ 6 ತಿಂಗಳುಗಳಲ್ಲಿ ಪ್ರತಿ ತಿಂಗಳು ವಿತರಣೆಯಾಗಿರುವ ಅಕ್ಕಿ, ಗೋಧಿ, ಸಕ್ಕರೆ ಹಾಗೂ ತಾಳೆ ಎಣ್ಣೆಯ ಪ್ರಮಾಣ ಎಷ್ಟು?*

4) *ಇವುಗಳ ಕೊರತೆಗೆ ಕಾರಣಗಳೇನು?*

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

1) ಅಕ್ಕಿ

ಗೋಧಿ